**ಸಾಕ್ಷಿಯನ್ನು ದಿಃ 31.07.2025 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು – 2 ನೇ ಎದುರುದಾರರ ಪರ ಶ್ರೀ ಎಂ.ವಿ.ಜಿ ವಕೀಲರಿಂದ**

1.ಗಾಯಾಳು ಸುಮಂತ್ ನಮ್ಮ ಆಸ್ಪತ್ರೆಗೆ 24.03.2023 ರಂದು ಬಂದಿರುತ್ತಾರೆ. ಪ್ರಮಾಣಪತ್ರದಲ್ಲಿ ನಾನು ಗಾಯಾಳು ಒಳರೋಗಿಯಾಗಿ ದಾಖಲಾದ ದಿನಾಂಕಗಳನ್ನು ಉದ್ದೇಶಪೂರ್ವಕವಾಗಿ ಮುಚ್ಚಿಟ್ಟಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಆಸ್ಪತ್ರೆಗೆ ಬರುವ ಮೊದಲು ಗಾಯಾಳು ಕೆ.ಆರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡಿದು ಬಂದಿದ್ದರು ಆ ಬಗ್ಗೆ ವಿವರ ನನಗೆ ಗೊತ್ತಿಲ್ಲ. ಗಾಯಾಳುವನ್ನು ಆಸ್ಪತ್ರೆಗೆ ದಾಖಲಾಗುವ ಮೊದಲು ನಾನು ನೋಡಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಅವರು ದಿನಾಂಕ 24.03.2023 ರಿಂದ 30.04.2023 ಹಾಗೂ ದಿನಾಂಕ 10.05.2023 ರಿಂದ 14.05.2023 ರವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ.

2. 10.05.2023 ರಂದು ಅವರ ಜಿ ಸಿ ಎಸ್ ಸ್ಕೋರ್ 15/15 ಇತ್ತು. 2 ನೆ ಬಾರಿ ಆಸ್ಪತ್ರೆಗೆ ದಾಖಲಾದಾಗ ಗಾಯಾಳುವಿಗೆ ಅರ್ಥೋಪೆಡಿಕ್ ಶ್ರಸ್ತ ಚಿಕಿತ್ಸೆ ಆಗಿದೆ. ನಾನು ಗಾಯಾಳುವಿಗೆ ಯಾವುದೇ ಶ್ರಸ್ತ ಚಿಕಿತ್ಸೆ ಮಾಡಿಲ್ಲ. ನನ್ನ ಚಿಕಿತ್ಸೆ conservative management (ಶ್ರಸ್ತ ಚಿಕಿತ್ಸ ರಹಿತ) ಗಾಯಾಳು ನಮ್ಮ ಆಸ್ಪತ್ರೆಗೆ ಹೊರರೋಗಿಯಾಗಿ ಡಿಸ್ ಚಾರ್ಜ್ ಆದ ನಂತರ 2-3 ತಿಂಗಳಿಗೊಮ್ಮೆ ಬಂದಿದ್ದಾರೆ. ಈ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಹಾಜರುಪಡಿಸಿರುವ ದಾಖಲೆಗಳನ್ನು ಹೊರತುಪಡಿಸಿ ನಿಮ್ಮ ಬಳಿ ಬೇರೆ ಯಾವುದೇ ದಾಖಲೆಗಳು ಇಲ್ಲ ಎಂದರೆ ಸಾಕ್ಷಿಯು ನಾನು ರೋಗಿಯಿಂದ ದಾಖಲೆಗಳನ್ನು ಪಡೆದುಕೋಂಡು ಹಾಜರುಪಡಿಸಿದ್ದೇನೆ ಎನ್ನುತ್ತಾರೆ.

3. ಮೇಲ್ಕಂಡ ದಾಖಲೆಗಳನ್ನು ಹೊರತುಪಡಿಸಿ ಬೇರೆ ಯಾವುದೇ ದಿನ ಗಯಾಳು ಚಿಕಿತ್ಸೆಗೆ ಬಂದಿಲ್ಲ, ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ಜಿ ಸಿ ಎಸ್ ಸ್ಕೋರ್ 15/15 ಇದ್ದ ಕಾರಣ ಅವರಿಗೆ ಯಾವುದೇ ನ್ಯೂರೋಲೊಜಿಕಲ್ ಡಿಪಿಸಿಟ್ ಇರಲಿಲ್ಲ ಎಂದರೆ ಸಾಕ್ಷಿಯು ಅವೆರಡೂ ಒಂದೇ ಅಲ್ಲದ ಕಾರಣ ಸಬಂದದ ಇಲ್ಲ ಎನ್ನುತ್ತಾರೆ. ಪೂವರ್ ಸ್ವಿಚ್ ಬಗ್ಗೆ ಮುಂದಿನ ಚಿಕಿತ್ಸೆಗೆ ಸಲಹೆ ಮಾಡಿದ್ದೀರಾ ಎಂದರೆ ಮಾಡಿದ್ದೇನೆ

ಎನ್ನುತ್ತಾರೆ. ಸ್ಪೀಚ್ ತೆರೆಪಿಗೆ ಒಳಪಟ್ಟಿದ್ದಾರೆ ಎಂಬ ಬಗ್ಗೆ ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಗಾಯಾಳುವಿಗೆ ಯಾವುದೇ ರೀತಿಯ ಸ್ಪೀಚ್ ಡಿಸ್‌ಆರ್ಡರ್ ಇರಲಿಲ್ಲ ಎಂದರೆ ಸರಿಯಲ್ಲ. ಗಾಯಾಳು ಈ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ಗಾಯಾಳು ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿರುವ ಕಾರಣ ಅವರಿಗೆ ಯಾವುದೇ ಡಿಸ್‌ಆರ್ಡರ್ ಇರಲಿಲ್ಲ ಎಂದರೆ ಸಾಕ್ಷಿಯು ಅದನ್ನು ಒಪ್ಪಲಾಗುವುದಿಲ್ಲ ಎನ್ನುತ್ತಾರೆ.

3. Clinical physiology ಯನ್ನು ಡಾಃ ಅಭಿರಾಮ್ ಎಮ್.ಅಜಯ್ ರವರು ದಿನಾಕ 4.04.2025 ರಂದು  ಮಾಡಿದ್ದಾರೆ. ನಾನು ದಿನಾಂಕ 29.07.2024 ರಂದು refer ಮಾಡಿದ್ದೆ. refer ಮಾಡಿದ ನಂತರ ತಡವಾಗಿ ಗಾಯಾಳು ಹೋಗಿದ್ದಾರೆ ಎಂದರೆ ಸರಿ. Physiological assessment ನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುವ ಉದ್ದೇಶದಿಂದ ತಡವಾಗಿ ಗಾಯಾಳು ಹೋಗಿದಾದರೆ ಎಂದರೆ ಸಾಕ್ಷಿಯು ತಡವಾಗಿ assessment ಮಾಡಿದ ನಂತರವೂ ಡಿಪಿಸಿಟ್ ಇದ್ದರೆ ನ್ಯೂನತೆ ರುಜುವಾತು ಆಗುತ್ತದೆ ಎನ್ನುತ್ತಾರೆ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4. Physiological assessment ಮತ್ತು ಇತರೇ ಎಲ್ಲಾ ನ್ಯೂನತೆಗಳ ಆಧಾರದ ಮೇಲೆ ನನ್ನ ವರದಿ ಸಲ್ಲಿಸಿದ್ದೇನೆ.ಡಾಃ ಅಭಿರಾಮ್ ಎಮ್.ಅಜಯ್ ರವರು ಗಾಯಾಳುವಿಗೆ ಚಿಕಿತ್ಸೆ ನೀಡಿದ ವೈದ್ಯರಲ್ಲ. ಅವರ Physiological assessment ಬಗ್ಗೆ ಸಾಕ್ಷಿ ನುಡಿಯಲು ಅವರೇ ಬರಬೇಕು ಎಂದರೆ ಅವಶ್ಯಕತೆ ಇಲ್ಲ ಎನ್ನುತ್ತಾರೆ. Clinical, radiological, electro physiological ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಗಾಯಾಳುವಿಗೆ ಆದ ಗಾಯಗಳು ಅಪಘಾತ ಅಲ್ಲದೆಯೇ ಬೇರೆ ರೀತಿ ಆಗುವ ಸಾಧ್ಯತೆಯು ಇದೆ ಎಂದರೆ ಸಾಕ್ಷಿಯು ಸಾಧ್ಯತೆ ಅತೀ ವಿರಳ ಎನ್ನುತ್ತಾರೆ.

5. ಆರ್ ಟಿ ಎ ಬಗ್ಗೆ ನನಗೆ ಕೇಸ್ ಶೀಟ್ ನ ಮುಖಾಂತರ ಮಾಹಿತಿ  ತಿಳಿಯಿತು. ಕೇಸ್ ಶೀಟ್ ನಲ್ಲಿ informant ಮಂಜೇಶ್ ಗಾಯಾಳುವಿನ ಸಹೋದರ ಎಂದು ನಮೂದಿದೆ. disability assessment ನ್ನು ನಾನು RPWD Act 2016 ರ ಆಧಾರದ ಮೇಲೆ

ಮಾಡಿದ್ದೇನೆ. ಗೆಜೆಟ್ notification ನ್ನು ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೇನೆ ಎಂದರೆ ಸರಿ. ನಾನು ಗೆಜೆಟ್ notification ಪ್ರಕಾರ assessment ಮಾಡಿಲ್ಲ ಎಂದರೆ ಸರಿಯಲ್ಲ. ಗೆಜೆಟ್ notification ಪ್ರಕಾರ 100% ಮೀರಬಾರದು ಎಂದು ಇದೆ ಎಂದರೆ ಸರಿ. 60% ನ್ಯೂನತೆ ಇದೆ ಎಂದು ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ನಾನು ನ್ಯೂನತೆಯನ್ನು ಸರಿಯಾಗಿ ಅಸೆಸ್ ಮಾಡಿಲ್ಲ ಎಂದರೆ ಸರಿಯಲ್ಲ. ದಿನಾಂಕ 14.03.2024 ರ ಪ್ರಕಾರ ನ್ಯೂನತೆ 80% ಹಾಗೂ 10% ಸೇರಿಸಿದ್ದಾರೆ 90% ನ್ಯೂನತೆ ಬರುತ್ತದೆ. ನಾನು ಹಳೆಯ ನೋಟಿಫಿಕೇಶನ್ ಪ್ರಕಾರ ಮಾಡಿದ್ದೇನೆ ತಿದ್ದುಪಡಿ ಆದದ್ದನ್ನು ಈ ದಿನ ಗಮನಿಸಿದ್ದೇನೆ ಎನ್ನುತ್ತಾರೆ.

6. ಪ್ರಮಾಣ ಪತ್ರದಲ್ಲಿ ಕೊಟ್ಟದ್ದನ್ನು ನೀವು ಒಪ್ಪುತ್ತೀರಾ ಎಂದರೆ ಸಾಕ್ಷಿಯು ತಿದ್ದುಪಡಿಗೆ ಮೊದಲಿನ ನೋಟಿಫಿಕೇಶನ್ ಪ್ರಕಾರ ನಾನು ವರದಿ ನೀಡಿದ್ದೇನೆ ಎನ್ನುತ್ತಾರೆ. ನಾನು ತಿದ್ದುಪಡಿ ಗೆಜೆಟ್ notification ಪ್ರಕಾರ ಅಸಿಸ್ ಮಾಡದೇ ರೋಗಿಗೆ ಸಹಾಯವಾಗಲಿ ಎಂಬ ಕಾರಣಕ್ಕೆ ತಪ್ಪಾಗಿ ವರದಿ ನೀಡಿದ್ದೇನ ಎಂದರೆ ಸರಿಯಲ್ಲ. 2018 ರ ನೋಟಿಫೀಕೇಶ್ ರಂತೆ ನಾನು ವರದಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಗಾಯಾಳುವಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.
(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.